# ಸತತ ಗಣನಾಥ ಸಿದ್ಧಿಯನೀವ ಕಾರ್ಯದಲಿ

1. Ref.: Shri Purandara Dasara Sahitya Part – 1, Pooja Tatva, edited by Shri Betageri Krishna Sharma and Shri Bengeri Huchhu Rayaru.
2. **Ref.:** Purandara Sahitya Darshana, Samputa 2, Adhyatma Darshana edited by Prof. S.K. Ramachandra Rao
3. **Ref.:** Samagra Dasa Sahity, Samputa 4, published by Kannada & Culture Dept, Govt of Karnataka, Bengaluru.
4. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi
5. **Note:** This is listed in both Keerthane and Ugabhoga as there are confusions in mentioning / classifying.  Wordings are same in both the listings.

ರಾಗ:   ನಾಟ          ತಾಳ:   ಅಟ್ಟ

ಸತತ ಗಣನಾಥ ಸಿದ್ಧಿಯನೀವ ಕಾರ್ಯದಲಿ
ಮತಿ ಪ್ರೇರಿಸುವಳು ಪಾರ್ವತೀ ದೇವಿ   ॥ ಪ ॥

ಮುಕುತಿ ಪಥಕೀವ ಮನ ಮಹರುದ್ರ ದೇವರು
ಭಕುತಿದಾಯಕಳು ಶ್ರೀ ಭಾರತೀ ದೇವಿಯು   ॥ ಅಪ ॥

ಯುಕುತ ಶಾಸ್ತ್ರಗಳಲ್ಲಿ ವನಜ ಸಂಭವನರಸಿ
ಸತ್ಕರ್ಮದಲಿ ನಡೆಸಿ ಸುಜ್ಞಾನ ಮತಿ ಇತ್ತು
ಗತಿ ಪಾಲಿಸುವ ನಮ್ಮ ಪವಮಾನನು   ॥ 1 ॥

ಚಿತ್ತದಲಿ ಆನಂದ ಸುಖವನೀವಳು ರಮಾ
ಭಕುತ ಜನರೊಡೆಯ ನಮ್ಮ ಪುರಂದರ ವಿಠಲನು
ಸತತ ಇವರೊಳು ನಿಂತು ಈ ಕೃತಿಯ ನಡೆಸುವನು   ॥ 2 ॥

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿಗಳು:**

ಲೋಕದ ಮತ್ತು ಲೋಕೋತ್ತರವಾದ ವ್ಯವಹಾರಗಳನ್ನೆಲ್ಲ ಒಂದು ಸುಸಂಬದ್ಧ ವ್ಯವಸ್ಥೆಯ ಕಕ್ಷೆಯಲ್ಲಿ ತಂದು ಆಯಾ ವಿಭಾಗದ ರಕ್ಷಕ ದೈವಗಳ ಸ್ಥಾನ ನಿರ್ದೇಶ ಮಾಡಿರುವುದು ಈ ಪದದ ವೈಶಿಷ್ಟ್ಯ. ಇಡಿಯ ಲೋಕ ವ್ಯವಸ್ಥೆಯನ್ನು ಒಂದು ಮಹಾಕೃತಿ ಎಂಬಂತೆ ರೂಪಿಸಿ ಈ ಮಹತ್ ಕೃತಿಯನ್ನು ರಚಿಸಿ ನಿರ್ವಹಿಸುತ್ತಿರುವ ಪುರಂದರ ವಿಠಲನ ಹಿರಿಮೆಯನ್ನು ಚಿತ್ರಿಸುವುದು ಕವಿಯ ಉದ್ದೇಶ.

ಈ ಉಗಾಭೋಗವು ತಾರತಮ್ಯಸ್ತೋತ್ರವೇ. ಆದರೆ ಇಲ್ಲಿ ದೇವತಾ ತಾರತಮ್ಯದ ಆರೋಹಣ ಕ್ರಮವನ್ನು ಅನುಸರಿಸಿದ್ದಾರೆ. ಮೊದಲು ಗಣಪತಿ (ಹದಿನೆಂಟನೆಯ ಕಕ್ಷೆ). ಅನಂತರ ಪಾರ್ವತಿ (ಏಳನೆಯ ಕಕ್ಷೆ). ರುದ್ರ (ಐದನೆಯ ಕಕ್ಷೆ), ಭಾರತಿ ಮತ್ತು ಸರಸ್ವತಿ (ನಾಲ್ಕನೆಯ ಕಕ್ಷೆ), ವಾಯು (ಮೂರನೆಯ ಕಕ್ಷೆ), ರಮಾದೇವಿ (ಎರಡನೆಯ ಕಕ್ಷೆ) ಮತ್ತು ಕಡೆಯಲ್ಲಿ ವಿಷ್ಣು (ಮೊದಲ ಕಕ್ಷೆ) ಇವರನ್ನು ಸ್ತುತಿಸಿದ್ದಾರೆ. ಗಣಪತಿಯ ಕಕ್ಷೆಯಲ್ಲೇ ಸೇರಿರುವ ಅಶ್ವಿನೀದೇವತೆಗಳು, ಇಲ್ಲಿ ಉಲ್ಲೇಖಕ್ಕೆ ಬಂದಿಲ್ಲ. ನಾಲ್ಕನೆಯ ಕಕ್ಷೆಯಲ್ಲಿ ಬ್ರಹ್ಮನ ಹೆಂಡತಿಯಾದ ಸರಸ್ವತಿಯೊಂದಿಗೆ ವಾಯು ಪತ್ನಿಯಾದ ಭಾರತೀದೇವಿಯೂ ಕಾಣಿಸಿಕೊಳ್ಳುತ್ತಾಳೆ. ಸರಸ್ವತಿಯು ಯುಕ್ತಿಗೂ (ಎಂದರೆ ಜ್ಞಾನಕ್ಕೂ), ಭಾರತಿಯು ಭಕ್ತಿಗೂ ಅಭಿಮಾನಿಗಳು.

**ಗಣನಾಥ** – ದೇವತಾತಾರತಮ್ಯದ ಹದಿನೆಂಟನೆಯ ಕಕ್ಷೆಯಲ್ಲಿರುವ ದೇವತೆಗಳೆಲ್ಲ ಗಣನಾಯಕರೇ. ವಿಷ್ವಕ್ಸೇನ ವಿಷ್ಣುಸೇನೆಯೆಂಬ ಗಣಕ್ಕೆ, ಕುಬೇರ ಯಕ್ಷಗಣಕ್ಕೆ, ಶತದೇವತೆಗಳು ವಸು–ರುದ್ರ–ಆದಿತ್ಯ–ಮರುದ್ಗಣಗಳಿಗೆ ಮತ್ತು ವಿಘ್ನೇಶ್ವರನು ವಿಘ್ನಗಣಗಳಿಗೆ ನಾಯಕರು. ವ್ಯವಹಾರದಲ್ಲೇನೊ ವಿಘ್ನೇಶ್ವರನನ್ನೇ ಗಣನಾಯಕನೆಂದು ಕರೆಯುವುದು ವಾಡಿಕೆ.

**ಪಾರ್ವತೀ ದೇವಿ** – ಐದನೆಯ ಕಕ್ಷೆಯಲ್ಲಿರುವ ಗರುಡ–ಶೇಷ–ರುದ್ರರ ಪತ್ನಿಯರು ಏಳನೆಯ ಕಕ್ಷೆಯಲ್ಲಿ ಸೇರುತ್ತಾರೆ: ಸೌಪರ್ಣಿ, ವಾರುಣಿ, ಪಾರ್ವತಿಯರು.

**ಪವಮಾನನು** – ಮೂರನೆಯ ಕಕ್ಷೆಯಲ್ಲಿರುವ ವಾಯು; ಮುಂದೆ ಅದೇ ಕಕ್ಷೆಯಲ್ಲಿ ಸ್ವಾಧಿಕನಾದ ಬ್ರಹ್ಮನ ಪದವಿಯನ್ನು ಪಡೆಯುವವನು.

**ರಮಾ** – ಲಕ್ಷ್ಮಿ. ಇವಳು ನಿತ್ಯ ಮುಕ್ತಳು. ಉಳಿದ ದೇವತೆಗಳಿಗಿಂತಲೂ ಪರಮಾತ್ಮನ ಬಗೆಗೆ ಹೆಚ್ಚಿನ ಜ್ಞಾನವುಳ್ಳವಳು. ಪರಮಾತ್ಮನಿಗೆ ಸಕಲ ಭೋಗಗಳನ್ನರ್ಪಿಸಿ ಆತನ ಸೇವೆಯಲ್ಲಿ ರತಳಾದವಳು. ಪರಮಾತ್ಮನ ಆಜ್ಞೆಯಂತೆ ಸುಜೀವಿಗಳಿಗೆ ಕರ್ಮಾನುಸಾರ ಮಾನಸಿಕ ಆನಂದ ಸುಖಪ್ರದಳು.

**ಇವರಲಿ ನಿಂತು** – ಇವರೆಲ್ಲರೂ ತತ್ತ್ವೇಶರಾದರೂ, ಅವರವರ ಕರ್ಮಗಳನ್ನು ನಡೆಸುವವರಾದರೂ ಅವರಲ್ಲಿ ಅಂತರ್ಯಾಮಿಯಾಗಿ ಪ್ರೇರಕನಾಗಿರುವ ವಿಷ್ಣುವಿನ ಅಧೀನರಾಗಿಯೇ ತಂತಮ್ಮ ಕಾರ್ಯಗಳನ್ನು ನಿರ್ವಹಿಸುತ್ತಾರೆ. ವಿಷ್ಣುವು ಸರ್ವೋತ್ತಮ, ಸರ್ವರಿಗೂ ಸತ್ತಾಪ್ರದ, ಪ್ರಮಿತಿಪ್ರದ ಮತ್ತು ಪ್ರವೃತ್ತಿಪ್ರದ; ಎಂದರೆ ಎಲ್ಲರೂ ಇರುವುದಕ್ಕೆ, ಅರಿಯುವುದಕ್ಕೆ ಕೆಲಸವನ್ನು ಕೈಗೊಳ್ಳುವುದಕ್ಕೆ ಕಾರಣನಾದವನು.

**ವನಜ ಸಂಭವನರಸಿ** – ಬ್ರಹ್ಮನ ರಾಣಿ, ಶಾರದೆ, ಸರಸ್ವತಿ

**Classification:** Keerthane / Ugabhoga
**Ankita:** Purandara Vittala
**Location:** NA
**Category:** Taratamya, Devata Stuti
**Group Words:** ganesha, Parvati, mukti, shiva, Bharati, devi, karma, jnana, saraswati, hanuma, Ananda, sukha, Lakshmi,
**Pravachana:** NA
**Explanation:** NA